ವಿಷಯ:- ರಾಜ್ಯದಲ್ಲಿ ಹೊಸದಾಗಿ ಖಾಸಗಿ ವೈದ್ಯಕೀಯ ಕಾಲೇಜುಗಳ ಸ್ಥಾಪನೆ.

10(69)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ರಾಜ್ಯದಲ್ಲಿ ಮುಂಬರುವ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಆರು ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಸರ್ಕಾರದವರು ತಾತ್ವಿಕ ಮಂಜೂರಾತಿ ನೀಡಿರುವುದು ನಿಜವೇ;

2) ಹಾಗಿದ್ದಲ್ಲಿ ಈ ಕಾಲೇಜುಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗುವುದು? ಈ ಉದ್ದೇಶಿತ ಕಾಲೇಜುಗಳ ಸ್ಥಾಪನೆಗೆ ಅಖಿಲ ಭಾರತೀಯ ವೈದ್ಯಕೀಯ ಮಂಡಳಿ ಹಾಗೂ ವಿಶ್ವವಿದ್ಯಾನಿಲಯಗಳ ಅನುಮತಿ ದೊರೆತಿದೆಯೇ;

3) ಈ ಹೊಸ ಕಾಲೇಜುಗಳಿಂದ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುತ್ತದೆ?

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):-

1) ಇಲ್ಲಾ.

2) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಆಗುಂಬೆಯಲ್ಲಿ ಮೇಘ ರಿಸಾರ್ಟ್‌ರವರಿಂದ ಹೋಟೆಲ್ ನಿರ್ಮಾಣ.

11(70)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ನಿಸರ್ಗ ತಾಣ ಆಗುಂಬೆಯಲ್ಲಿ ಮೇಘ ರೆಸಾರ್ಟ್ ಎಂಬ ಖಾಸಗಿ ಸಂಸ್ಥೆಗೆ ಹೋಟೇಲ್ ನಿರ್ಮಿಸಲು ಸರ್ಕಾರದವರು ಅನುಮತಿ ನೀಡಿದ್ದಾರೆಯೇ;

ಆ) ಇದರಿಂದ ಈ ಪ್ರದೇಶದ ಪರಿಸರದ ದಕ್ಕೆಗೆ ಕಾರಣವಾಗುವುದಿಲ್ಲವೇ?

ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯಸಚಿವರು).

ಅ) ಈ ರೆಸಾರ್ಟ್ ಪ್ರಾರಂಭಿಸುವ ಬಗ್ಗೆ ಅನುಮತಿ ಕೋರಿ ಪರಿಸರ ಇಲಾಖೆಗೆ ಮನವಿ ಬಂದಿಲ್ಲ.

ಆ) ಮನವಿ ಬಂದ ನಂತರ ಪರಿಶೀಲಿಸಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.